**ದಿನಾಂಕಃ 21.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **4 ನೇ ಪ್ರತಿವಾದಿ ಪರ ಶ್ರೀ.ಆರ್.ಎನ್ ವಕೀಲರಿಂದಃ**

ದಾವಾ ಅನುಸೂಚಿ ಸ್ವತ್ತಿನ ಜಂಜರ್ ನಂಬರ್ ಮತ್ತು ಖಾತೆ ನಂಬರ್ ನನಗೆ ನೆನಪಿಲ್ಲ. ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತಿಗೆ ತೊಂದರೆ ನೀಡಬಾರದು ಎಂದು ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆಯ 4 ನೇ ಪ್ರತಿವಾದಿಯ ವಿರುದ್ಧ ನಾನು ಯಾವುದೇ ಪರಿಹಾರವನ್ನು ಈ ದಾವೆಯಲ್ಲಿ ಕೋರಿರುವುದಿಲ್ಲ. 4 ನೇ ಪ್ರತಿವಾದಿಯವರು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ-2 ರಿಂದ 8 ಮತ್ತು ನಿಪಿ-17, 18 ರ ಕಂದಾಯ ರಶೀದಿಗಳಿಗೂ ಈ ದಾವೆಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ತ್ರಿವೇಣಿನಗರವು ಒಂದು ಏರಿಯಾ ಮತ್ತು ಭೈರಾಪುರ ಒಂದು ಗ್ರಾಮ ಎಂದರೆ ಸರಿ. 1984 ರ ಒಳಗೆ ದಾವಾ ಅನುಸೂಚಿ ಸ್ವತ್ತಿನಲ್ಲಿ ನಾನು ಯಾವುದೇ ಕಟ್ಟಡವನ್ನು ನಿರ್ಮಿಸಿರುವುದಿಲ್ಲ. ನಾನು ಇದುವರೆಗೂ ದಾವಾ ಅನುಸೂಚಿ ಸ್ವತ್ತಿನಲ್ಲಿ ಯಾವುದೇ ಕಟ್ಟಡವನ್ನು ನಿರ್ಮಿಸಿರುವುದಿಲ್ಲ. ನಾನು ಆರ್. ಎ ನಂಬರ್ 127/2001 ರಂತೆ ವೆಂಕಟಚಲಾ ರವರ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಆರ್. ಎ ನಂಬರ್ 127/2001 ರಲ್ಲಿ ನಾನು ಯಾವುದೇ ರಾಜಿ ಮಾಡಿಕೊಂಡಿರುವುದಿಲ್ಲ. ವೆಂಕಟಚಲಾ ರವರು ದಾವಾ ಅನುಸೂಚಿ ಸ್ವತ್ತಿನಲ್ಲಿ 11 ಅಡಿ ದಾರಿ ಇದೆ ಎಂದು ಹೇಳುತ್ತಿದ್ದ ಜಾಗದಲ್ಲಿ ಈ ಹಿಂದೆ ತೆಂಗಿನ ಮರಗಳು ಇದ್ದವು ಎಂದರೆ ಸರಿ. ಸದರಿ ತೆಂಗಿನ ಮರಗಳನ್ನು 4 ನೇ ಪ್ರತಿವಾದಿಯವರು ಮನೆ ನಿರ್ಮಿಸಲು ತಳಹಾದಿ ತೆಗೆಯುವಾಗ ಕತ್ತರಿಸಿದ್ದರು ಎಂದರೆ ಸರಿಯಲ್ಲ. ಸದರಿ ತೆಂಗಿನ ಮರಗಳನ್ನು ನಾನೇ ಸುಮಾರು 30 ವರ್ಷಗಳ ಹಿಂದೆ ಕತ್ತರಿಸಿದ್ದೆನು.

ವೆಂಕಟಚಲಾ ರವರು ತಾವು ತರುಗಾಡುವ ಜಾಗಕ್ಕೆ ಈ ದಾವೆಯ 4 ನೇ ಪ್ರತಿವಾದಿಯವರ ವಿರುದ್ಧ ಅಸಲು ದಾವಾ ಸಂಖ್ಯೆ 256/2013 ರನ್ನು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಲೀಂ ಅಹ್ಮದ್ ರವರು ಆಸ್ತಿಯಲ್ಲಿ ಸ್ವಾಧೀನತೆ ಹೊಂದಿದ್ದಾರೆ ಎಂದು ಹೇಳಿ ಸದರಿ ಸ್ವಾಧೀನತೆಯನ್ನು ಬಿಡಿಸಿಕೊಡಿ ಎಂದು ಪರಿಹಾರ ಕೋರಿ ನಾನು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ಘೋಷಣಾತ್ಮಕ ಪರಿಹಾರವನ್ನು ಕೋರಿ 4 ನೇ ಪ್ರತಿವಾದಿಯವರ ವಿರುದ್ಧ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ಘೋಷಣಾತ್ಮಕ ಪರಿಹಾರವನ್ನು ಕೋರಿ 1 ನೇ ಪ್ರತಿವಾದಿಯವರ ವಿರುದ್ಧ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ನಾನು ಈ ದಾವೆಯನ್ನು 2 ನೇ ಪ್ರತಿವಾದಿಯವರ ವಿರುದ್ಧ ವ್ಯಕ್ತಿಗತವಾಗಿ ಮತ್ತು ಅವರು ನಿರ್ವಹಿಸಿದ್ದ ಕರ್ತವ್ಯದ ವಿರುದ್ಧವಾಗಿ

ಸಲ್ಲಿಸಿರುತ್ತೇನೆ. 2 ನೇ ಪ್ರತಿವಾದಿಯವರು ಈಗ ತಿ. ನರಸೀಪುರದಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಭೈರಾಪುರ ಗ್ರಾಮ ಪಂಚಾಯಿತಿಯು ತಿ. ನರಸೀಪುರ ಪುರಸಭೆಗೆ ಸೇರಿದೆ ಎಂದರೆ ಸರಿ. ಈ ದಾವೆಯಲ್ಲಿ ಪುರಸಭಾ ಮುಖ್ಯಧಿಕಾರಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ 2 ಮತ್ತು 3 ನೇ ಪ್ರತಿವಾದಿಯವರಿಗೆ ನಾನು ಯಾವುದೇ ನೋಟೀಸು ನೀಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ತಿ. ನರಸೀಪುರ ಪುರಸಭೆಯಲ್ಲಿ ನಾನು ಖಾತೆ ಹೊಂದಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ದಾವೆಯು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವುದರಿಂದ ಖಾತೆ ಮಾಡಿಕೊಟಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಅನುಸೂಚಿ ಸ್ವತ್ತಿಗೆ ಖಾತೆ ಮಾಡಿಕೊಡುವಂತೆ ಕೋರಿ ಪುರಸಭೆಗೆ ಅರ್ಜಿ ಸಲ್ಲಿಸಲು ಹೋದಾಗ ಪುರಸಭೆಯವರು ತೆಗೆದುಕೊಂಡಿರುವುದಿಲ್ಲ. ಸದರಿಯವರ ವಿರುದ್ಧ ನಾನು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ನಾನು ಹೇಳಿದಂತೆ ದಾವಾ ಅನುಸೂಚಿ ಸ್ವತ್ತು ನನ್ನ ಹೆಸರಿಗೆ ಮಂಜೂರಾತಿ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವೆಂಕಟಚಲಾ ರವರು ಸೇರಿ ದಾವಾ ಅನುಸೂಚಿ ಸ್ವತ್ತನ್ನು ಕಬಳಿಸಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ